## ಈ ಲೇಖನದ ವಿಷಯಾನುಕ್ರಮಣಿಕೆ


ಯುಗಾದಿಯನ್ನು ಎಂದು ಆಚರಿಸಬೇಕು 2

ಕರ್ಮ-ಕಾಲ-ತಿಥಿಗಳ ಸಂಬಂಧ 4

ಪ್ರತಿಪದಾ ಉದಯಕಾಲದಲ್ಲಿರಬೇಕು 8

ಅಮಾವಾಸ್ಯಾಯುಕ್ತವಾದ ಪ್ರತಿಪದೆ ಶ್ರೇಷ್ಠ 9

ಎರಡು ಸೂರ್ಯೋದಯಗಳಲ್ಲಿ ಪ್ರತಿಪದೆ ಇದ್ದರೆ ಮೊದಲ ಪ್ರತಿಪದೆಯೇ ಶ್ರೇಷ್ಠ 10

ಮಂಗಳವಾರದಂದು ಸೂರ್ಯೋದಯದಲ್ಲಿ ಪ್ರತಿಪದೆಯೇ ಇಲ್ಲ 11

ಪ್ರತಿಪದಾಶ್ರಾದ್ಧ, ವ್ರತಗಳು ಮಂಗಳವಾರದಂದು 13

ಬುಧವಾರದಂದು ಯುಗಾದಿ 14

## ಯುಗಾದಿಯನ್ನು ಎಂದು ಆಚರಿಸಬೇಕು

ನಾವು ವರ್ಷಪೂರ್ತಿ ಆಚರಿಸುವ ಎಲ್ಲ ವ್ರತ, ಹಬ್ಬ, ಉಪವಾಸಗಳನ್ನೂ ನಿರ್ದಿಷ್ಟತಿಥಿಯಂದೇ ಆಚರಿಸಬೇಕು.

ಆಚರಿಸುವ ತಿಥಿ ಯಾವ ರೀತಿ ಇರಬೇಕು ಎನ್ನುವದನ್ನು ತಿಳಿದುಕೊಳ್ಳಬೇಕು.

ಈ ವರ್ಷ, ಅಂದರೆ ಹೇಮಲಂಬ ಸಂವತ್ಸರದ ಪ್ರಥಮದಿವಸದಲ್ಲಿಯೇ ಈ ವಿಚಾರ ಪ್ರಸ್ತುತವಾಗಿದೆ.

ದುರ್ಮುಖಸಂವತ್ಸರದ ಫಾಲ್ಗುನ ಕೃಷ್ಣ ಅಮಾವಾಸ್ಯೆಯು ಮಾರ್ಚ 28ರ ಬೆಳಿಗ್ಗೆ ಸುಮಾರು 8:25 ರ ವೇಳೆಗೆ ಮುಗಿಯುತ್ತದೆ. ಆ ನಂತರ ಪ್ರತಿಪದೆ ಆರಂಭ. ಮಾರನೆಯ ದಿವಸ 29 ನೆಯ

ತಾರೀಕು 6:50 ರವರೆಗೆ ಪ್ರತಿಪದೆ ಇದೆ. ಆ ನಂತರ ದ್ವಿತೀಯಾ ಆರಂಭ.

ಈಗ ಪ್ರಶ್ನೆ — ಯುಗಾದಿಯನ್ನು 28ನೆಯ ತಾರೀಕು ಆಚರಿಸಬೇಕೋ, ಅಥವಾ 29ನೆಯ ತಾರೀಕು ಆಚರಿಸಬೇಕೋ ಎಂದು.

ಇದರಲ್ಲಿ ಶಾಸ್ತ್ರದ ನಿಲುವೇನು ಎನ್ನುವದನ್ನು, ಗುರುಗಳ ಪಾದಸ್ಮರಣೆಯನ್ನು ಮಾಡಿ ಅರಿಯಲು ಪ್ರಯತ್ನಿಸೋಣ.

## ಕರ್ಮ-ಕಾಲ-ತಿಥಿಗಳ ಸಂಬಂಧ

ಸೂರ್ಯೋದಯ, ಮಧ್ಯಾಹ್ನ ಮತ್ತು ಸೂರ್ಯಾಸ್ತಗಳಲ್ಲಿ ಯಾವ ತಿಥಿ ಇರುತ್ತದೆಯೋ ಅ ತಿಥಿ ಸಂಪೂರ್ಣ ತಿಥಿ ಎಂದು ಕರೆಸಿಕೊಳ್ಳುತ್ತದೆ.

ಅನೇಕ ಸಂದರ್ಭಗಳಲ್ಲಿ ಈ ರೀತಿಯಾದ ಸಂಪೂರ್ಣ ತಿಥಿ ದೊರೆಯುವದಿಲ್ಲ. ಆಗ ಯಾವ ರೀತಿಯ ತಿಥಿಯನ್ನು ಗ್ರಹಣ ಮಾಡಬೇಕು ಎಂದರೆ ಶಾಸ್ತ್ರ ಉತ್ತರ ನೀಡುತ್ತದೆ —

> **ದೇವಕಾರ್ಯೇ ತಿಥಿರ್ಜ್ಞೇಯಾ**
> **ಯಸ್ಯಾಮಭ್ಯುದಿತೋ ರವಿಃ ।**
> **ಪಿತೃಕಾರ್ಯೇ ತಿಥಿರ್ಜ್ಞೇಯಾ**
> **ಯಸ್ಯಾಮಸ್ತಮಿತೋ ರವಿಃ[1] ।**

ಉದಯಕಾಲದಲ್ಲಿ ಯಾವ ತಿಥಿ ಇರುತ್ತದೆಯೋ ಆ ತಿಥಿಯನ್ನು ದೇವಕಾರ್ಯಗಳಿಗಾಗಿ ಬಳಸಬೇಕು.

[1] ವೀರಮಿತ್ರೋದಯ ಸಮಯಪ್ರಕಾಶ, 24ನೆಯ ಪುಟ.

ಸೂರ್ಯಾಸ್ತದ ಕಾಲದಲ್ಲಿ (ಇನ್ನೂ ಮುಖ್ಯವಾಗಿ ಕುತಪಕಾಲದಲ್ಲಿ) ಯಾವ ತಿಥಿ ಇರುತ್ತದೆಯೋ ಅದನ್ನು ಪಿತೃಕಾರ್ಯಗಳಿಗಾಗಿ ಬಳಸಬೇಕು.

ಹೀಗೆಯೇ ಯಾವ ಕರ್ಮವನ್ನು ಯಾವ ಕಾಲದಲ್ಲಿ ಮಾಡಬೇಕು ಎಂದು ಶಾಸ್ತ್ರ ವಿಧಿಸುತ್ತದೆಯೋ ಆ ಕಾಲದಲ್ಲಿ ಆ ತಿಥಿ ಇದ್ದಾಗಲೇ ಅದನ್ನು ಗ್ರಹಿಸಬೇಕು.

ಉದಾಹರಣೆಗೆ, ಶ್ರೀಕೃಷ್ಣನಿಗೆ ಅರ್ಘ್ಯವನ್ನು ನೀಡಬೇಕಾದ್ದು ಶ್ರಾವಣ ಕೃಷ್ಣ ಅಷ್ಟಮಿಯ ರಾತ್ರಿಯಲ್ಲಿ. ಹೀಗಾಗಿ ಆ ಅಷ್ಟಮಿ ರಾತ್ರಿಯಲ್ಲಿರಬೇಕು, ದೊರೆಯದೇ ಇದ್ದಾಗ ಪ್ರದೋಷಕಾಲದಲ್ಲಿಯಾದರೂ ಇರಬೇಕು. ಸೂರ್ಯೋದಯದಲ್ಲಿರಲಿ ಇಲ್ಲದಿರಲಿ ಚಿಂತೆಯಿಲ್ಲ.

ಇದನ್ನು ವಿಷ್ಣುಧರ್ಮೋತ್ತರಪುರಾಣ[2] ತಿಳಿಸುತ್ತದೆ —

---

[2] ಸ್ಮೃತಿಮುಕ್ತಾವಲಿಯ ಕಾಲನಿರ್ಣಯಪ್ರಕರಣದಲ್ಲಿ 89ನೆಯ ಪುಟ. ಈ ವಾಕ್ಯ ಯಾಜ್ಞವಲ್ಕ್ಯಸ್ಮೃತಿ ಮುಂತಾದವುಗಳಲ್ಲಿಯೂ ಉಲ್ಲಿಖಿತವಾಗಿದೆ. ವೃದ್ಧಯಾಜ್ಞವಲ್ಕ್ಯಸ್ಮೃತಿ ಎಂದು ವೀರಮಿತ್ರೋದಯದಲ್ಲಿದೆ.

**ಕರ್ಮಣೋ ಯಸ್ಯ ಯಃ ಕಾಲಃ**
**ತತ್ಕಾಲವ್ಯಾಪಿನೀ ತಿಥಿಃ**
**ತಯಾ ಕರ್ಮಾಣಿ ಕುರ್ವೀತ**
**ಹ್ರಾಸವೃದ್ಧೀ ನ ಕಾರಣಮ್**

ಯಾವ ಕರ್ಮಕ್ಕೆ ಯಾವ ಕಾಲ ವಿಹಿತವಾಗಿದೆಯೋ ಆ ಕಾಲದಲ್ಲಿ ಆ ಕರ್ಮಕ್ಕೆ ಸಂಬಂಧಪಟ್ಟ ತಿಥಿ ಇರಬೇಕು. ತಿಥಿಯ ಹ್ರಾಸ ವೃದ್ಧಿ ಮುಂತಾದವುಗಳನ್ನು ಇಲ್ಲಿ ಗಮನಿಸಬೇಕಾಗಿಲ್ಲ.

ಹೀಗಾಗಿ ಕರ್ಮದ ಆಚರಣೆಗೆ ಸೂಕ್ತವಾದ ಕಾಲದಲ್ಲಿ ಆ ಕರ್ಮಕ್ಕೆ ಸಂಬಂಧಪಟ್ಟ ತಿಥಿ ಇರಬೇಕು ಎನ್ನುವದು ಎಲ್ಲ ಧರ್ಮಶಾಸ್ತ್ರಕಾರರೂ ಒಪ್ಪಿದ ವಿಷಯ.

ಈಗ ಸಮಸ್ಯೆ ಏನು ಎನ್ನುವದನ್ನು ತಿಳಿಯೋಣ —

ಈ ಬಾರಿ ಚೈತ್ರ ಶುದ್ಧ ಪ್ರತಿಪದೆ 28ನೆಯ ತಾರೀಕು ಮಂಗಳವಾರ ಬೆಳಿಗ್ಗೆ 8.20 ರ ನಂತರ

ಆರಂಭವಾಗುತ್ತದೆ. ಅಂದರೆ ಸೂರ್ಯೋದಯಕ್ಕೆ ಪ್ರತಿಪದೆ ಇಲ್ಲ. ಅಮಾವಾಸ್ಯೆಯೇ ಇದೆ.

29ನೆಯ ತಾರೀಕು ಬೆಳಿಗ್ಗೆ 6:50 ರ ವೇಳೆಗೆ ಪ್ರತಿಪದೆ ಮುಗಿದು ಬಿಡುತ್ತದೆ.
ಸೂರ್ಯೋದಯದ ಕಾಲಕ್ಕೆ ಪ್ರತಿಪದೆ ಇದೆ.

ಹೀಗಾಗಿ ಯುಗಾದಿಯನ್ನು ಎಂದು ಆಚರಿಸಬೇಕು? ಮಂಗಳವಾರ ಬೆಳಿಗ್ಗೆ ಎಂಟೂವರೆಯಿಂದ ಆರಂಭಿಸಿ ಮಾರನೆಯ ದಿವಸ ಸೂರ್ಯೋದಯದ ನಂತರವೂ ಪ್ರತಿಪದೆ ಇರುವದರಿಂದ ಮಂಗಳವಾರ ಆಚರಿಸಬೇಕೋ ಅಥವಾ ಮಂಗಳವಾರದ ದಿವಸ ಸೂರ್ಯೋದಯಕ್ಕೆ ಪ್ರತಿಪದೆ ಇಲ್ಲದಿರುವದರಿಂದ ಬುಧವಾರದಂದು ಆಚರಿಸಬೇಕೋ ಎಂದು ಪ್ರಶ್ನೆ.

ಬುಧವಾರದಂದೇ ಆಚರಿಸಬೇಕು. ಸಂಶಯವಿಲ್ಲ. ಏಕೆ ಎನ್ನುವದನ್ನು ತಿಳಿಯೋಣ.

## ಪ್ರತಿಪದಾ ಉದಯಕಾಲದಲ್ಲಿರಬೇಕು

ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ಆಚರಣೆ. ಶ್ರೀ ಛಲಾರೀ ನರಸಿಂಹಾಚಾರ್ಯರು ತಮ್ಮ ಸ್ಮೃತ್ಯರ್ಥಸಾಗರದಲ್ಲಿ **ಚೈತ್ರಶುಕ್ಲಪ್ರತಿಪತ್ ಉದಯವ್ಯಾಪಿನೀ ಗ್ರಾಹ್ಯಾ** ಯುಗಾದಿಪ್ರತಿಪದೆಯು ಉದಯವ್ಯಾಪಿನಿ-ಯಾಗಿರಬೇಕು ಎಂದು ತಿಳಿಸುತ್ತಾರೆ. ಅಂದರೆ ಸೂರ್ಯೋದಯದ ಕಾಲಕ್ಕೆ ಪ್ರತಿಪದಾ ತಿಥಿಯಿರಬೇಕು ಎಂದರ್ಥ.

ಕಾರಣ, ಯುಗಾದಿಯಲ್ಲಿ ಪ್ರಧಾನವಾದದ್ದು ಸ್ನಾನ ಮತ್ತು ಪಂಚಾಂಗಶ್ರವಣ. ಸ್ನಾನಕ್ಕೆ ಮುಖ್ಯಕಾಲವಾದದ್ದು ಸೂರ್ಯೋದಯಕ್ಕಿಂತ ಹಿಂದಿನ 96 ನಿಮಿಷಗಳು.

ಸೂರ್ಯೋದಯ ಕಾಲಕ್ಕೆ ಯಾವ ತಿಥಿ ಇರುತ್ತದೆಯೋ ಅದೇ ತಿಥಿ ಸಂಧ್ಯಾ-ವಂದನಾದಿಗಳಿಗೆ ಗ್ರಾಹ್ಯ. ಹೀಗಾಗಿ ಉದಯಕಾಲದಲ್ಲಿ ಇರುವ ಪ್ರತಿಪದೆ ಇರಲೇಬೇಕು.

## ಅಮಾವಾಸ್ಯಾಯುಕ್ತವಾದ ಪ್ರತಿಪದೆ ಶ್ರೇಷ್ಠ

ಈ ಪ್ರತಿಪದೆಯ ವಿಷಯ ಸ್ವಲ್ಪ ಗಹನವಾಗಿದೆ.

ದಶಮೀವೇಧವಿರುವ ಏಕಾದಶಿಯನ್ನು ಹೇಗೆ ಆಚರಿಸಬಾರದೋ, ಹಾಗೆ ಅಮಾವಾಸ್ಯೆಯಿಂದ ಯುಕ್ತವಾದ ಪ್ರತಿಪದೆಯನ್ನೇ ಆಚರಿಸಬೇಕು ಎಂದು ಶಾಸ್ತ್ರದ ನಿಯಮ.

ಅಮಾವಾಸ್ಯೆಯಿಂದ ಯುಕ್ತವಾದ ಪ್ರತಿಪದೆ ಶ್ರೇಷ್ಠವಾದದ್ದು. ಹೀಗಾಗಿ ಮಂಗಳವಾರದಂದು ನಿಗಮದ ವಾಕ್ಯ ಹೀಗಿದೆ —

> **ಪ್ರತಿಪದ್ಯಪ್ಯಮಾವಾಸ್ಯಾ**
> **ತಿಥ್ಯೋರ್ಯುಗ್ಮಂ ಮಹಾಫಲಮ್**
> **ಏತದ್ ವ್ಯಸ್ತಂ ಮಹಾದೋಷಂ**
> **ಹಂತಿ ಪುಣ್ಯಂ ಪುರಾಕೃತಮ್**

ಅಮಾವಾಸ್ಯೆಯಿಂದ ಯುಕ್ತವಾದ ಪ್ರತಿಪದೆಯ ಆಚರಣೆ ಮಹಾಫಲವನ್ನು ನೀಡುತ್ತದೆ. ಅಮಾಯುಕ್ತವಾದ ಪ್ರತಿಪದೆಯನ್ನು ಬಿಟ್ಟಲ್ಲಿ

ಮಹಾದೋಷ ಒದಗುತ್ತದೆ, ಹಿಂದೆ ಮಾಡಿದ ಪುಣ್ಯವೂ ವಿನಾಶವಾಗುತ್ತದೆ.

ಹೀಗಾಗಿ ಮಂಗಳವಾರವೇ ಯುಗಾದಿಯನ್ನು ಆಚರಿಸಬೇಕಲ್ಲ ಎಂದು ನಮಗೆ ತೋರುತ್ತದೆ.

ಆದರೆ ತಿಳಿಯಬೇಕಾದ ಮಹತ್ತ್ವದ ವಿಷಯ ಇನ್ನೂ ಇದೆ.

## ಎರಡು ಸೂರ್ಯೋದಯಗಳಲ್ಲಿ ಪ್ರತಿಪದೆ ಇದ್ದರೆ ಮೊದಲ ಪ್ರತಿಪದೆಯೇ ಶ್ರೇಷ್ಠ

ನಿಜ, ಅಮಾವಾಸ್ಯೆಯಿಂದ ಯುಕ್ತವಾದ ಪ್ರತಿಪದೆ ಶ್ರೇಷ್ಠ. ಆದರೆ, ಪ್ರತಿಪದೆ ಸೂರ್ಯೋದಯ-ದಲ್ಲಿರಬೇಕು.

ಎರಡು ಸೂರ್ಯೋದಯಗಳಲ್ಲಿ ಪ್ರತಿಪದೆ ಇದ್ದಾಗ ಯಾವ ಪ್ರತಿಪದೆಯನ್ನು ಯುಗಾದಿಗಾಗಿ ಗ್ರಹಿಸಬೇಕು ಎಂದರೆ ಅಮಾವಾಸ್ಯೆಯಿಂದ ಕೂಡಿದ ಪ್ರತಿಪದೆಯನ್ನೇ ಗ್ರಹಿಸಬೇಕು.

## ಮಂಗಳವಾರದಂದು ಸೂರ್ಯೋದಯದಲ್ಲಿ ಪ್ರತಿಪದೆಯೇ ಇಲ್ಲ

**ಅಂದರೆ, ಮಂಗಳವಾರವೂ ಸೂರ್ಯೋದಯಕ್ಕೆ ಪ್ರತಿಪದೆ ಇದ್ದು, ಬುಧವಾರವೂ ಸೂರ್ಯೋಯದಯಕ್ಕೆ ಪ್ರತಿಪದೆ ಇದ್ದಿದ್ದಲ್ಲಿ ಮಂಗಳವಾರದಂದೇ ನಾವು ಯುಗಾದಿಯನ್ನು ಆಚರಿಸಬೇಕಿತ್ತು. ಆದರೆ ಮಂಗಳವಾರದಂದು ಸೂರ್ಯೋದಯಕ್ಕೆ ಪ್ರತಿಪದೆಯೇ ಇಲ್ಲ. ಯುಗಾದಿಯ ಆಚರಣೆ ಮಾಡಬೇಕಾದರೆ ಸೂರ್ಯೋದಯಕ್ಕೆ ಪ್ರತಿಪದೆ ಇರಲೇಬೇಕು. "ಸಾ ಚ ಔದಯಿಕೀ ಗ್ರಾಹ್ಯಾ" ಎಂದು ಶಾಸ್ತ್ರ ಹೇಳುತ್ತದೆ. ಹೀಗಾಗಿ ಈ ಬಾರಿ ಮಂಗಳವಾರದಂದು ಯುಗಾದಿಯ ಪ್ರಸಕ್ತಿಯೇ ಇಲ್ಲ. ಮಾಡಬಾರದು.**

ಈ ಪ್ರತಿಪದೆಯ ಆಚರಣೆ ವರ್ಷದಲ್ಲಿ ಮೂರು ಬಾರಿ ಬರುತ್ತದೆ. ಚೈತ್ರ ಶುದ್ಧ ಪ್ರತಿಪದೆಯಂದು ಯುಗಾದಿ. ಆಶ್ವೀನ ಶುದ್ಧ ಪ್ರತಿಪದೆಯಂದು ದುರ್ಗಾಪೂಜೆ. ಕಾರ್ತೀಕಶುದ್ಧಪ್ರತಿಪದೆಯಂದು ಬಲಿಪಾಡ್ಯಮೀ.

ಇದರಲ್ಲಿ ಆಶ್ವೀನಶುದ್ಧಪ್ರತಿಪದೆಯಂದು ದುರ್ಗಾಪೂಜೆ ಮಾಡಬೇಕಾದರೆ ಸರ್ವಥಾ ಅಮಾವಾಸ್ಯೆಯಿಂದ ಪ್ರತಿಪದೆ ಕೂಡಿರಬಾರದು ಎಂದು ಶಾಸ್ತ್ರ ತಿಳಿಸುತ್ತದೆ[3]. ಅಂದರೆ ಅಮಾಯುಕ್ತವಾದ ಪ್ರತಿಪದೆ ಶ್ರೇಷ್ಠ ಎಂಬ ಮಾತಿಗೆ ಅಪವಾದ ಇದ್ದೇ ಇದೆ.

ಇಲ್ಲಂತೂ ಮಂಗಳವಾರದ ದಿವಸ ಪ್ರತಿಪದೆ ಸೂರ್ಯೋದಯದಲ್ಲಿ ಇಲ್ಲವೇ ಇಲ್ಲವಾದ್ದರಿಂದ ಆ ದಿನ ಯುಗಾದಿ ಮಾಡುವಂತಿಲ್ಲ.

ಮತ್ತೂ, ಸೂರ್ಯೋದಯಕ್ಕೆ ಯಾವ ತಿಥಿ ಇರುತ್ತದೆಯೋ ಅದನ್ನೇ ಮೂರೂ ಹೊತ್ತಿನ ಸಂಧ್ಯಾವಂದನೆಯಲ್ಲಿ ಬಳಸಬೇಕು. ಹೀಗಾಗಿ ಮಂಗಳವಾರದಂದು ದುರ್ಮುಖ ಸಂವತ್ಸರೇ ಫಾಲ್ಗುನಕೃಷ್ಣಪಕ್ಷೇ ಅಮಾವಾಸ್ಯಾಯಾಂ ಎಂದೇ ಮೂರೂ ಸಂಧ್ಯಾವಂದನೆಗಳಲ್ಲಿ ಸಂಕಲ್ಪ. ಹೀಗಾಗಿ ಸಂಧ್ಯಾವಂದನೆಯ ಆಚರಣೆಗೂ ನೂತನ ಸಂವತ್ಸರ ಬಂದಿರುವದಿಲ್ಲ.

---

[3] ಪೂರ್ವವಿದ್ಧಾ ತು ಯಾ ಶುಕ್ಲಾ ಭವೇತ್ ಪ್ರತಿಪದಾಶ್ವಿನೀ ।
ನವರಾತ್ರವ್ರತಂ ತಸ್ಯಾಂ ನ ಕರ್ತವ್ಯಂ ಶುಭೇಚ್ಛುನಾ ।। ಮಾರ್ಕಂಡೇಯ.

## ಪ್ರತಿಪದಾಶ್ರಾದ್ಧ, ವ್ರತಗಳು ಮಂಗಳವಾರದಂದು

ಶ್ರಾದ್ಧತಿಥಿ ಮಧ್ಯಾಹ್ನವ್ಯಾಪಿನಿಯಾಗಿರಬೇಕು ಮತ್ತು ಅಸ್ತಗಾಮಿನಿಯಾದ ತಿಥಿ ಶ್ರಾದ್ಧಕ್ಕೆ ಶ್ರೇಷ್ಠವಾದ್ದರಿಂದ ಚೈತ್ರ ಶುದ್ಧ ಪ್ರತಿಪದೆಯಂದು ಮರಣ ಹೊಂದಿದವರ ಶ್ರಾದ್ಧವನ್ನು 28/3/2017 ಮಂಗಳವಾರದಂದೆ ಮಾಡಬೇಕು.

ಮತ್ತೂ ಯುಗಾದಿ ಪ್ರತಿಪದೆಯಲ್ಲಿ ಉಪವಾಸದ ಒಂದು ವ್ರತವೂ ಇದೆ. ನಮ್ಮಲ್ಲಿ ಆಚರಣೆಯಿಲ್ಲ. ಕಾಮ್ಯಕರ್ಮ. ಅದನ್ನು ಮಾಡುವವರು ಯಾರಾದರೂ ಇದ್ದರೆ ಅವರೂ ಮಂಗಳವಾರದಂದೆ ಉಪವಾಸವನ್ನು ಮಾಡಬೇಕು. ಹಬ್ಬದ ಆಚರಣೆಯನ್ನು ಮಾತ್ರ ಬುಧವಾರದಂದು ಮಾಡಬೇಕು.

## ಬುಧವಾರದಂದು ಯುಗಾದಿ

ಯುಗಾದಿಯ ಮುಖ್ಯ ಆಚರಣೆ, ಸ್ನಾನ, ಪಂಚಾಂಗಶ್ರವಣಗಳಾದ್ದರಿಂದ ಅವನ್ನು ಪ್ರಾತಃಕಾಲದಲ್ಲಿಯೇ ಮಾಡಬೇಕಾದ್ದರಿಂದ, ಉದಯಕಾಲದಲ್ಲಿರುವ ಪ್ರತಿಪದೆಯನ್ನೇ ಗ್ರಹಿಸಬೇಕಾದ್ದರಿಂದ

ಬುಧವಾರದಂದು ಮಾತ್ರ ಸೂರ್ಯೋದಯದ ಕಾಲದಲ್ಲಿ ಪ್ರತಿಪದೆ ಇರುವದರಿಂದ, 29/3/2017 ರಂದು ಅಭ್ಯಂಗ ಪಂಚಾಂಗಶ್ರವಣ, ಬೇವುಬೆಲ್ಲ ಸ್ವೀಕಾರಗಳ ಆಚರಣೆಯನ್ನು ಮಾಡಬೇಕು.

**ಯುಗಾದಿಯಂದು ವಿಶೇಷವಾಗಿ ಹೊಸವಸ್ತುಗಳನ್ನು ಖರೀದಿ ಮಾಡುವ ಪದ್ಧತಿ ಕೆಲವರಲ್ಲಿದೆ. ಆ ಖರೀದಿಯನ್ನೂ ಬುಧವಾರದಂದೇ ಮಾಡಬೇಕು.**

ಯುಗಾದಿಯ ಆಚರಣೆಯ ಕ್ರಮವನ್ನು ಮುಂದಿನ ಲೇಖನದಲ್ಲಿ ತಿಳಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ